ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1007

ಸದಸ್ಯರ ಹೆಸರು : ಶ್ರೀ ಅಪ್ಪಾಜಿಗೌಡ

(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 22.12.2021

ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಮಂಡ್ಯ ಜಿಲ್ಲೆ, ಮದ್ದೂರು ತಾಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸ.ನಂ.51ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ; (ಸಂಪೂರ್ಣ ಮಾಹಿತಿ ನೀಡುವುದು)	ಮಂಡ್ಯ ಜಿಲ್ಲೆ, ಮದ್ದೂರು ತಾಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸ.ನಂ.51ರಲ್ಲಿ ಒಟ್ಟು 1-15 ಎಕರೆ/ಗುಂಟೆ ಜಮೀನು ಇರುತ್ತದೆ.
(ಆ)	ಸದರಿ ಜಮೀನನ್ನು ಯಾರ್ಯಾರ ಹೆಸರಿನಲ್ಲಿ, ಯಾವ ಸಾಲಿನಲ್ಲಿ ಯಾವ ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ; (ವಿಸ್ತೀರ್ಣವಾರು ಮಾಹಿತಿ ನೀಡುವುದು)	ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
(ಇ)	ಸದರಿ ಜಮೀನನ್ನು ಇಬ್ಬರು ಫಲಾನುಭವಿಗಳಿಗೆ ಮಂಜೂರು ಮಾಡಲಾಗಿದೆಯೇ; ಮಾಡಿದ್ದಲ್ಲಿ ಯಾವ ಫಲಾನುಭವಿಯು ಅನುಭವದಲ್ಲಿರುತ್ತಾರೆ; ಹಾಗೂ ಯಾರು ಅನುಭವದಲ್ಲಿರುವುದಿಲ್ಲ; (ಸಂಪೂರ್ಣ ಮಾಹಿತಿ ನೀಡುವುದು)	ಸದರಿ ಜಮೀನನ್ನು ಒಟ್ಟು 13 ಫಲಾನುಭವಿಗಳಿಗೆ ಮಂಜೂರಾಗಿರುತ್ತದೆ. ಮಂಜೂರಾತಿಯಾಗಿ ಹಿಸ್ಸಾ ದುರಸ್ತಿಯಾದ ನಂತರ ಕೆಲವು ಪ್ರಕರಣಗಳಲ್ಲಿ ಮಂಜೂರಿದಾರರ ವಾರಸುದಾರರು ಇನ್ನೂ ಕೆಲವು ಪ್ರಕರಣಗಳಲ್ಲಿ ದುರಸ್ತಿಯಾದ ನಂತರ ಕ್ರಯದ ವಹಿವಾಟುಗಳು ನಡೆದು ಖಾತೆಯಾಗಿ ಪಹಣಿ ದಾಖಲುಗೊಂಡಿರುತ್ತದೆ. 2020-21 ನೇ ಸಾಲಿನ ಆರ್.ಟಿ.ಸಿಯಂತೆ ಅನುಬಂಧ-2 ರಲ್ಲಿರುವ ಖಾತೆದಾರರೆಲ್ಲರೂ ಸ್ವಾಧೀನಾನುಭವದಲ್ಲಿರುತ್ತಾರೆ.
(ಈ)	ಜಮೀನು ಮಂಜೂರಾದ ಕೆಲವು ಫಲಾನುಭವಿಗಳು ಅನುಭವಕ್ಕೆ ಹೋಗದೆ, ಬೇರೆಯವರಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;(ಮಾಹಿತಿ ನೀಡುವುದು)	ಇಂತಹ ಪ್ರಕರಣಗಳು ಯಾವುದೂ ಇರುವುದಿಲ್ಲ
(ಉ)	ಜಮೀನು ಮಂಜೂರಾದ ಯಾವ ಫಲಾನುಭವಿಗಳು ಅನುಭವದಲ್ಲಿರುತ್ತಾರೆ ಹಾಗೂ ಯಾವ ಫಲಾನುಭವಿಗಳು ಅನುಭವದಲ್ಲಿರುವುದಿಲ್ಲ; ಈ ಬಗ್ಗೆ ಸ್ಥಳ ತನಿಖೆ ಮಾಡಲಾಗಿದೆಯೇ; (ಮಾಹಿತಿ ನೀಡುವುದು)	ಸ್ಥಳ ತನಿಖೆ ಮಾಡಲಾಗಿ, ಉಪ ಪ್ರಶ್ನೆ ಸಂಖ್ಯೆ (ಅ) ಮತ್ತು (ಆ)ರಲ್ಲಿ ನೀಡಲಾದ ಮಾಹಿತಿಯಂತೆ ಕೆಲವು ಪ್ರಕರಣಗಳಲ್ಲಿ ಮಂಜೂರಿದಾರರ ವಾರಸುದಾರರು ಇನ್ನೂ ಕೆಲವು ಪ್ರಕರಣಗಳಲ್ಲಿ ದುರಸ್ತಿಯಾದ ನಂತರ ಕ್ರಯದಾರರು ಸ್ವಾಧೀನಾನುಭವದಲ್ಲಿರುತ್ತಾರೆ.

ಊ)	ಜಮೀನು ಮಂಜೂರಾದ ಫಲಾನುಭವಿಗಳು ಮಂಜೂರಾದ ಜಮೀನಿಗೆ ಅನುಭವಕ್ಕೆ ಹೋಗದೆ ಮೃತರಾದಲ್ಲಿ ವಾರಸುದಾರರಿಗೆ ಯಾವ ಮಾನದಂಡ ಅನುಸರಿಸಿ ಖಾತೆ ಬದಲಾವಣೆ ಮಾಡಲಾಗುತ್ತದೆ; (ಸಂಪೂರ್ಣ ಮಾಹಿತಿ ಒದಗಿಸವುದು)	ಮಂಜೂರಿದಾರರಿಗೆ ಜಮೀನು ಮಂಜೂರಾಗಿ ಖಾತೆಯಾದಂತೆ ಖಾತೆದಾರರು ಮೃತಪಟ್ಟಲ್ಲಿ ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 62(3)) ರಂತೆ ನಮೂನೆ-19 ರ ಪ್ರಕಾರ ಪೌತಿ ವಾರಸುದಾರರಿಗೆ ಪೌತಿ ಖಾತೆ ಮಾಡಲು ಕ್ರಮವಹಿಸಲಾಗುತ್ತದೆ..
(ಋ)	ಜಮೀನು ಮಂಜೂರಾದ ಫಲಾನುಭವಿಗಳು ಅನುಭವದಲ್ಲಿದ್ದು, ಅವರ ಹೆಸರಿನಲ್ಲಿ ಖಾತೆ, ಪಕ್ಕಾಪೋಡು ದುರಸ್ಥಿ ಆಗಿರುವುದನ್ನು ಸರಕಾರ ವಜಾಗೊಳಿಸಬಹುದೇ? (ಸಂಪೂರ್ಣ ಮಾಹಿತಿಯನ್ನು ಒದಗಿಸವುದು	ಮೇಲ್ಮನವಿ ಪ್ರಾಧಿಕಾರಗಳು ವಿಚಾರಣಾ ನ್ಯಾಯಾಲಯದಲ್ಲಿ ಮಂಜೂರಿ ಜಮೀನಿನ ದುರಸ್ಥಿಯನ್ನು ರದ್ದುಪಡಿಸುವ/ಸ್ಥಿರೀಕರಿಸುವ ಆದೇಶ ಹೊರಡಿಸುವ ಅಧಿಕಾರ ಹೊಂದಿರುತ್ತಾರೆ.

(ಕಡತ ಸಂಖ್ಯೆ:ಕಂಇ 62 ಎಲ್‌ಜಿವೈ 2021)

(ಆರ್.ಅಶೋಕ)

ಕಂದಾಯ ಸಚಿವರು

ಕರ್ನಾಟಕ ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1007ಕ್ಕೆ ಅನುಬಂಧಗಳು

ಅನುಬಂಧ-1

ಕ್ರಮ ಸಂಖ್ಯೆ	ಖಾತಾದಾರರ ಹೆಸರು ಶ್ರೀ/ಶ್ರೀಮತಿ	ಮಂಜೂರಾತಿ ಯಾದ ಸಾಲು	ಉದ್ದೇಶ	ವಿಸ್ತೀರ್ಣ (ಎಕರೆ/ಗುಂಟೆ)
1.	ಚೆಲುವಯ್ಯ ಬಿನ್ ಮಾದೇಗೌಡ	1981-82	ವ್ಯವಸಾಯೇತರ	0.03.00
2.	ಚಂದ್ರು ಬಿನ್ ಕುಳ್ಳಯ್ಯ	1981-82	ವ್ಯವಸಾಯೇತರ	0.02.00
3.	ಜಯಮ್ಮ ಕೋಂ ಲೇಟ್ ರಾಜಣ್ಣ	1981-82	ವ್ಯವಸಾಯೇತರ	0.02.00
4.	ಶ್ರೀ ಕಂಠಾಚಾರ್ ಬಿನ್ ರುದ್ರಚಾರ್	1981-82	ವ್ಯವಸಾಯೇತರ	0.02.00
5.	ಹನುಮಯ್ಯ ಬಿನ್ ಚಟ್ಟುಳಯ್ಯ	1981-82	ವ್ಯವಸಾಯೇತರ	0.03.00
6.	ಕೆಂಪಾಚಾರಿ ಬಿನ್ ಚೆನ್ನಾಚಾರಿ	1981-82	ವ್ಯವಸಾಯೇತರ	0.03.00
7.	ಅಂಕಯ್ಯ ಬಿನ್ ಕೆಂಪಯ್ಯ	1974-75	ವ್ಯವಸಾಯೇತರ	0.02.00
8.	ನಿಂಗಯ್ಯ ಬಿನ್ ಮರಿಚನ್ನಯ್ಯನ ನಿಂಗಯ್ಯ	1911-92	ವ್ಯವಸಾಯೇತರ	0.05.00
9.	ಲಕ್ಷ್ಮಣರಾಜು ಬಿನ್ ರಾಮಯ್ಯ	1979-80	ವ್ಯವಸಾಯೇತರ	0.04.00
10.	ಚನ್ನಪ್ಪ ಬಿನ್ ಮಾದಯ್ಯ	1986-87	ವ್ಯವಸಾಯೇತರ	0.03.00
11.	ಎಸ್.ವಿ.ಅಪ್ಪಾಜಿ ಬಿನ್ ಸಿದ್ದಾಚಾರಿ	1992-93	ವ್ಯವಸಾಯೇತರ	0.02.00
12.	ಎನ್.ಆರ್. ರಂಗನಾಥ್	1967-68	ವ್ಯವಸಾಯೇತರ	0.10.00
13.	ಚನ್ನಪ್ಪ ಬಿನ್ ಸೋಸಿ ಮಾದಯ್ಯ	1979-80	ವ್ಯವಸಾಯ	0.04.00

ಅನುಬಂಧ-2

ಕ್ರಮ ಸಂಖ್ಯೆ	ಸರ್ವೆ ನಂಬರ್	ಖಾತಾದಾರರ ಹೆಸರು	ವಿಸ್ತೀರ್ಣ (ಎಕರೆ/ಗುಂಟೆ)
1.	51/1ಎ	ಎಸ್.ಟಿ.ಚಂದ್ರು ಬಿನ್ ತಿರುಮಲಯ್ಯ ಎಸ್.ವಿ. ಅಂಕಯ್ಯ ಬಿನ್ ಕೆಂಪಯ್ಯ	0.03.04 0.02.00
2.	51/1ಬಿ	ಚನ್ನಪ್ಪ ಬಿನ್ ಮಾದಯ್ಯ	0.02.00
3.	51/3	ಎಸ್.ವಿ ಅಪ್ಪಾಜಿ ಬಿನ್ ಸಿದ್ದಾಚಾರಿ	0.02.00
4.	51/4	ಸಾಕಮ್ಮ ಕೋಂ ಚಂದ್ರು	0.02.00
5.	51/5	ಆರ್. ಲಕ್ಷ್ಮಣರಾಜು ಬಿನ್ ರಾಮಯ್ಯ	0.04.00
6.	51/6	ಎಲ್.ಕುಮಾರರಾಮ ಬಿನ್ ಲಕ್ಷ್ಮಣರಾವ್	0.02.00
7.	51/7	ರೂಪವಾಣಿ ಕೋಂ ಎಸ್.ಟಿ ಚಂದ್ರು	0.02.00
8.	51/8	ಕೆಂಪಚಾರಿ ಬಿನ್ ಚನ್ನಾಚಾರಿ	0.03.00
9.	51/9	ಲಕ್ಷ್ಮಮ್ಮ ಕೋಂ ಹನುಮಯ್ಯ	0.03.00
10.	51/1ರಪೈಕಿ	ಎಸ್.ಟಿ ಚಂದ್ರು ಬಿನ್ ತಿರುಮಲಯ್ಯ	0.06.12
11.	51/2	ಚಲುವಯ್ಯ ಬಿನ್ ಮಾದೇಗೌಡ	0.03.00
12.	51 ರ ಪೈಕಿ	ಎನ್. ನಾಗಣ್ಣ ಬಿನ್ ಮರಿಚನ್ನಮ್ಮನ ನಿಂಗಯ್ಯ	0.01.04
13.	51ಪೈ ಪಿ1	ಎಂ.ಎನ್ ಕೃಷ್ಣಯ್ಯ ಬಿನ್ ಮರಿಚನ್ನಮ್ಮನ ನಿಂಗಯ್ಯ	0.01.04
14.	51ಪೈ ಪಿ2	ಎಂ.ಎನ್ ಮಾದಯ್ಯ ಬಿನ್ ಮರಿಚನ್ನಮ್ಮನ ನಿಂಗಯ್ಯ	0.01.04
15.	51ಪೈ ಪಿ3	ನಿಂಗರಾಜು ಬಿನ್ ಮರುಚನ್ನಮ್ಮನ ನಿಂಗಯ್ಯ	0.01.04